ಕೋಲಾರ ಹಾಗೂ ಚಿಕ್ಕಬಳ್ಳಾಪುರದಲ್ಲಿ ಶೀತಲ ಕೇಂದ್ರಗಳ ನಿರ್ಮಾಣ

೪೩. ಶ್ರೀ ಆರ್. ವೆಂಕಟರಾಮಯ್ಯ (ಮಂಗಳಬಾಗಿಲು).—ಮಾನ್ಯ ತೋಟಗಾರಿಕಾ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಚಿಕ್ಕಬಳ್ಳಾಪುರ ಶೀತಲ ಕೇಂದ್ರ ಕಟ್ಟಡಗಳಿಗೆ ಸರಕಾರದವರು ಮಾಡಿರುವ ವೆಚ್ಚವೆಷ್ಟು,

ಆ) ಈ ವರೆವಿಗೂ ಪ್ರಾರಂಭಿಸದೆ ಸುಮ್ಮನೆ ಬಿಟ್ಟಿರುವುದಕ್ಕೆ ಕಾರಣವೇನು,

ಇ) ಆದರಿಂದ ಆದ ನಷ್ಟವೆಷ್ಟು ಹಾಗೂ ತಕ್ಷಣ ಪ್ರಾರಂಭಿಸಬೇಕೆಂಬ ಬೇಡಿಕೆ ಸರಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಸೋಮಶೇಖರ್ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಕೋಲಾರ ಹಾಗೂ ಚಿಕ್ಕಬಳ್ಳಾಪುರ ಶೀತಲ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ರೂ. ೩,೭೫,೦೦೦ ಹಾಗೂ ೧,೫೦,೨೮೦ ರೂಗಳನ್ನು ಅನುಕ್ರಮವಾಗಿ ಖರ್ಚು ಮಾಡಿದೆ.

ಆ) ಶೀತಲ ಕೇಂದ್ರಗಳ ಕಟ್ಟಡಗಳ ದುರಸ್ತಿ ಕೆಲಸಗಳನ್ನು "ಟರ್ನ್ ಕೀ ಬೇಸಿಸ್" ಆಧಾರದ ಮೇರೆಗೆ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಲಿ ನಿಯಮಿತ ಇವರಿಗೆ ವಹಿಸಲಾಗಿದೆ. ಕೋಲಾರ ಶೀತಲ ಕೇಂದ್ರದ ಕಟ್ಟಡಕ್ಕೆ ಒಂದು ಕೊಠಡಿ ಕೆಲಸ ಪೂರ್ಣ ಗೊಂಡಿದ್ದು ಪ್ರಾರಂಭಿಸಲು ಹಂತದಲ್ಲಿದೆ; ಇನ್ನುಳಿದ ಕೊಠಡಿಗಳಕೆಲಸಗಳು ಪ್ರಗತಿಯ ಹಂತದಲ್ಲಿದೆ.

ಚಿಕ್ಕಬಳ್ಳಾಪುರ ಶೀತಲ ಕೇಂದ್ರದ ಕಟ್ಟಡದ ಬಗ್ಗೆ ದುರಸ್ತಿ ಕೆಲಸಗಳೆಲ್ಲಾ ಮುಗಿದಿದ್ದು, ಕಡಿನ್ಸಿಂಗ್ ಯೂನಿಟ್ ಯಂತ್ರವನ್ನು ಅಳವಡಿಸುವ ಸಲುವಾಗಿ ಕರ್ನಾಟಕ ಸಹಕಾರಿ ಉತ್ಪಾದಕರ ಮಹಾ ಮಂಡಳಿಯು ಈ ಯಂತ್ರವನ್ನು ಕೊಂಡುಕೊಳ್ಳುವ ಸೂಕ್ತ ಏರ್ಪಾಡು ಮಾಡಿದೆ,

ಇ) ಈ ಶೀತಲ ಕಟ್ಟಡಗಳು ಇನ್ನೂ ಪ್ರಾರಂಭಿಸದೇ ಇರುವುದರಿಂದ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ. ಹಾಗೂ ತಕ್ಷಣ ಈ ಶೀತಲ ಕೇಂದ್ರಗಳನ್ನು ಪ್ರಾರಂಭಿಸಬೇಕೆಂಬ ಬೇಡಿಕೆಗಳು ಸರ್ಕಾರದ ಗಮನಕ್ಕೆ ಬಂದಿವೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಈ ಕೋಲಾರದ ಕಟ್ಟಡದ ಬಗ್ಗೆ ಎಸ್ಟಿಮೇಟ್ ಕಾಸ್ಟ್ ಎಷ್ಟು ? ಅದರ ಬಿಲ್ಡಿಂಗ್ ಕಾಸ್ಟ್ ಎಷ್ಟು ? ಮತ್ತು ಮೆಷಿನರಿ ಕಾಸ್ಟ್ ಎಷ್ಟು ? ಮಂಜೂರಾಗಿದ್ದು ಯಾವಾಗ ? ಇಲ್ಲಿಯವರೆಗೂ ಎಷ್ಟು ಖರ್ಚು ಮಾಡಲಾಗಿದೆ ? ಈ ಕಟ್ಟಡವು ಇಷ್ಟು ದಿನಗಳ ಕಾಲ ನಿಂತಿದ್ದಕ್ಕೆ ಕಾರಣವೇನು, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ, ಕಳೆದ ಅಧಿವೇಶನದಲ್ಲಿ ಪ್ರಶ್ನೆ ಹಾಕಿದಾಗ ತಕ್ಷಣ ಮಾಡುತ್ತೇವೆ ಎಂದು ಹೇಳಿದ್ದೀರಿ. ಆಮೇಲೆ, ಚಿಕ್ಕಬಳ್ಳಾಪುರ ಕಟ್ಟಡಕ್ಕೆ ಎಷ್ಟು ಖರ್ಚು ಮಾಡಲಾಗಿದೆ, ಸಿಬ್ಬಂದಿಗೆ ಎಷ್ಟು ಖರ್ಚುಮಾಡಲಾಗಿದೆ ? ಎಷ್ಟುವರೆಗೆ ಹೇಳುತ್ತೀರಾ ?

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವ ಪ್ರಶ್ನೆಗೆ ಉತ್ತರ ಈ ರೀತಿ ಇದೆ. ಕೋಲಾರದ ಕಟ್ಟಡದ ಬಗ್ಗೆ ೩ ಲಕ್ಷ ೭೫ ಸಾವಿರ, ಚಿಕ್ಕಬಳ್ಳಾಪುರದ್ದು ೧ ಲಕ್ಷ, ೫೦ ಸಾವಿರ ಕೋಲಾರಕ್ಕೆ ಪ್ಲಾಂಟ್ ಅಂಡ್ ಮೆಷಿನರಿ ೨೮,೫೫,೩೩೦ ರೂಪಾಯಿಂಗಳು. ಚಿಕ್ಕಬಳ್ಳಾಪುರ ಬಿಲ್ಡಿಂಗ್ ೧,೯೦,೨೦೦ ರೂಪಾಯಿಗಳು, ಪ್ಲಾಂಟ್ ಅಂಡ್ ಮೆಷಿನರಿ ೩,೨೪,೮೩೦. ಅದು ಬ್ರೇಕ್ ಅಪ್. ನಾವು ಈಗಾಗಲೇ ಹೇಳಿರುವ ಪ್ರಕಾರ, ಅದನ್ನು ಕೆ ಎಂ ಎಫ್ ಗೆ ಕೊಟ್ಟಿದ್ದೇವೆ ಹಣ ಬೇಕಾಗಿದ್ದುದರಿಂದ, ಆ ಕೆಲಸ ನಿಧಾನವಾಯಿತು. ದಿನಾಂಕ ೫-೧-೮೬ ರಲ್ಲಿ ೭ ಲಕ್ಷ ರೂಪಾಯಿಂಗಳನ್ನು ಒದಗಿಸಿ ಕೊಟ್ಟಿದ್ದೇವೆ. ಅದರ ಪ್ರಕಾರ, ಮಾರ್ಚ್ ಒಳಗೆ ಮುಗಿಸಿಕೊಡಲು ಆಶ್ವಾಸನೆ ಕೊಟ್ಟಿದ್ದಾರೆ. ಅದರ ಪ್ರಕಾರ ತೀವ್ರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಚಿಕ್ಕಬಳ್ಳಾಪುರದಲ್ಲಿ ಈ ಕೆಲಸ ೨೦ ವರ್ಷಗಳಿಂದ ನಡೆಯುತ್ತಾ ಇದೆ. ಪ್ರಾರಂಭವಾಗಿ ಒಂದು ವರ್ಷದಲ್ಲಿಯೇ ಮುಗಿಯಬೇಕಾಗಿತ್ತು. ಈ ಕಟ್ಟಡಕ್ಕೆ ಈಗ

ಶ್ರೀ ಸೋಮಶೇಖರ್ ರವರಷ್ಟೇ ವಯಸ್ಸಾಗಿದೆ. ಬೆಂಗಳೂರಿನಲ್ಲಿರತಕ್ಕ ಕೋಲ್ಡ್ ಸ್ಟೋರೇಜ್, ಮಹಾರಾಜರ ಆರಮನೆಯ ತರಹ ನಡೆಯುತ್ತಿದೆ. ಈ ಕೆಲಸವನ್ನು ಮುಗಿಸಿಕೊಡುತ್ತೇವೆಂದು ಹೋದ ವರ್ಷವೇ ಆಶ್ವಾಸನೆ ಕೊಟ್ಟಿದ್ದಿರಿ. ಇದು ನಿಧಾನವಾಗಲು ಕಾರಣವೇನು ? ಅವರ ಲೆಕ್ಕದ ಪ್ರಕಾರ, ೩೫ ಲಕ್ಷ ಕೋಲ್ಡ್ ಸ್ಟೋರೇಜ್ ಇದೆ. ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಸೋಮಶೇಖರ್.—ಈಗಾಗಲೇ ಇದರ ಕೆಲಸ ವಿಳಂಬವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಅದಕ್ಕೆ ನಾನಾ ರೀತಿಯ ತಾಂತ್ರಿಕ ಕಾರಣಗಳಿಂದ ವಿಳಂಬವಾಗಿದೆ. ಈ ಕೆಲಸವನ್ನು ನವಲ್ಲಿಂದೇ ಇಲಾಖೆಯವರೂ ಮಾಡುತ್ತಿಲ್ಲ. ನಾವು ಕೆ. ಎಂ. ಎಫ್. ಅವರಿಗೆ ಹಣವನ್ನು ಕೊಟ್ಟು ಅವರಿಂದ ಕೆಲಸ ಮಾಡಿಸಂತ್ತಿದ್ದೇವೆ. ಆದ್ದರಿಂದ ಇದನ್ನು ಇನ್ನೂ ವಿಳಂಬವಾಗಂವುದಕ್ಕೆ ಅವಕಾಶ ಕೊಡಂವುದಿಲ್ಲ ಆದಷ್ಟು ಬೇಗ ಇದನ್ನು ಕಾರ್ಯರೂಪಕ್ಕೆ ತರುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ಕೆಲಸ ಪ್ರಾರಂಭವಾಗಿ ೨೫ ವರ್ಷಗಳಾಗಿವೆ. ೩೫ ಲಕ್ಷ ಹಣವನ್ನು ಖರ್ಚು ಮಾಡಿದ್ದಾರೆ. ಇದು ಪೂರ್ಣ ತಿಂಗಳಲ್ಲಾದರೂ ಪ್ರಾರಂಭ ವಾಗಂತ್ತದೆಯೇ ? ಹಾಗೆ ಇಲ್ಲದಿದ್ದರೆ ಇದನ್ನು ಅಷ್ಟರಲ್ಲಿ ಮುಂಗಿಸುವುದಕ್ಕೆ ಯೋಗ್ಯತೆ ಇಲ್ಲವೆಂದು ನಾವು ತೀರ್ಮಾನಿಸ ಬೇಕಾಗುತ್ತದೆ. ತಪ್ಪು ಮಾಡಿರುವಂತಹ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಸೋಮಶೇಖರ್.—ಇದನ್ನು ತ್ವರಿತಗತಿಯಿಂದ ಪ್ರಾರಂಭ ಮಾಡಬೇಕೆಂಬ ಉದ್ದೇಶ ದಿಂದ ಅನೇಕ ಸಭೆಗಳನ್ನು ಕರೆದು ಚರ್ಚೆ ಮಾಡಿದ್ದೇವೆ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೂ ಹಾಗೂ ನಾನು ಈ ತಿಂಗಳ ೨೪ನೇ ತಾರೀಖಿಗೆ ಚಿಕ್ಕಬಳ್ಳಾಪುರಕ್ಕೆ ಹೋಗುತ್ತಿದ್ದೇವೆ. ಆದಷ್ಟು ಬೇಗ ಇದನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಕುಂದಾಪುರ ತಾಲ್ಲೂಕು ತೆಕ್ಕಟ್ಟೆ ಸರಕಾರಿ ಕಿರಿಯ ಕಾಲೇಜಿಗೆ ಉಪನ್ಯಾಸಕರ ನೇಮಕಾತಿ

೭೬೧ ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳ ಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುಂದಾಪುರ ತಾಲ್ಲೂಕು ತೆಕ್ಕಟ್ಟೆ ಸರ್ಕಾರಿ ಕಿರಿಯ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯ ವರ ಸಂಖ್ಯೆ ಎಷ್ಟು

ಆ) ಮಂಜೂರಾದ ಉಪನ್ಯಾಸಕರ ಸಂಖ್ಯೆ ಎಷ್ಟು ಹಾಗೂ ಕೊರತೆ ಇರುವ ಉಪನ್ಯಾಸಕರ ಸಂಖ್ಯೆ ಎಷ್ಟು

ಇ) ತರಗತಿಯ ಆಯಾ ವಿಷಯಂಗಳಿಗನುಸಾರವಾಗಿ ಶಿಕ್ಷಕರ ನೇಮಕಾತಿ ಆಗಿದೆಯೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ವಿದ್ಯಾರ್ಥಿಗಳು.—

ಪಿ.ಯು.ಸಿ.—೧	...	೧೫೫
ಪಿ.ಯು.ಸಿ.—೨	...	೦೭
ವಿದ್ಯಾರ್ಥಿನಿಯರು		
ಪಿ.ಯು.ಸಿ.—೧	...	೨೫೫
ಪಿ.ಯು.ಸಿ.—೨	...	೧೨
ಒಟ್ಟು	...	೫೯